ಅ) ದಕ್ಷಿಣ ಕನ್ನಡ ಬೆಳ್ತಂಗಡಿ ಪ್ರದೇಶಕ್ಕೆ ಅಗತ್ಯವುಳ್ಳ ಒಳಚರಂಡಿ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ;

ಆ) ರೂಪಿಸಿದಲ್ಲಿ ಯಾವಾಗ ಜಾರಿಗೆ ತರುವುದು;

ಇ) ಜಾರಿಗೆ ತರಲು ವಿಳಂಬವಾಗಲು ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಸರ್ವೆ ಕಾರ್ಯ ಹಾಗೂ ಅಂದಾಜು ಮತ್ತು ವಿನ್ಯಾಸಕ್ಕಾಗಿ ಅಂದಾಜು ರೂ. 4.00 ಲಕ್ಷಗಳನ್ನು ನಗರ ಪಂಚಾಯ್ತಿ ತುಂಬ ಬೇಕಾಗುತ್ತದೆ. ಹಣ ಠೇವಣಿ ಮಾಡಿದ ಕೂಡಲೇ ಸರ್ವೆ ವಿನ್ಯಾಸ ಹಾಗೂ ಅಂದಾಜು ತಯಾರಿಸಲು ಕ್ರಮ ಜರುಗಿಸಲಾಗುವುದು.

680(635) : ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ನಗರ ಪ್ರದೇಶಕ್ಕೆ ಈಗಾಗಲೇ ಒದಗಿಸಿಕೊಟ್ಟಿರುವ ಮೂಲಭೂತ ಸೌಕರ್ಯಗಳಾವುವು (ವಿವರಗಳನ್ನು ನೀಡುವುದು);

ಆ) ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆಯೇ;

ಇ) ಈ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆಗಾಗಿ ಕೈಗೊಳ್ಳಲಿರುವ ಕ್ರಮಗಳೇನು;

ಈ) ಸುದೆಮುಗೇರು ಎಂಬಲ್ಲಿ ಕಿಂಡಿ ಅಣೆಕಟ್ಟನ್ನು ನಿರ್ಮಿಸಿ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವರೇ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಬೆಳ್ತಂಗಡಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಮಾರ್ಚ್ 1995ರಲ್ಲಿ ಪೂರ್ಣಗೊಳಿಸಲಾಗಿದೆ. ಸದರಿ ನೀರು ಸರಬರಾಜು ವ್ಯವಸ್ಥೆಯ ನಿರ್ವಹಣೆಯನ್ನು ನಗರ ಸಭೆಯವರೇ ನಿರ್ವಹಿಸುತ್ತಿದ್ದಾರೆ.

ಆ) ಕುಡಿಯುವ ನೀರು ಸರಬರಾಜು ವ್ಯವಸ್ಥೆ ಕಲ್ಪಿಸಲಾಗಿದೆ. ಒಳಚರಂಡಿ ವ್ಯವಸ್ಥೆ ಕಲ್ಪಿಸಿರುವುದಿಲ್ಲ.

ಇ) ಶೇಖರಣಾ ವ್ಯವಸ್ಥೆಯನ್ನು ಹೆಚ್ಚಿಸಲು ಮೇಲ್ಮಟ್ಟದ ಜಲಸಂಗ್ರಹಾಗಾರಗಳು ನಿರ್ಮಿಸಲು ಹಾಗೂ ಏಳು ಕೊಳವೆ ಮಾರ್ಗದ ಸಂಪರ್ಕ ಕಲ್ಪಿಸಲು, ಸರ್ವೆ ಮಾಡಲು ಅಂದಾಜಿನ ಪ್ರೊತ್ತವನ್ನು ನಗರ ಪಂಚಾಯಿತಿಯವರಿಂದ ಪಡೆದು ಸರ್ವೆ ಕಾರ್ಯ ಕೈಗೊಳ್ಳಲಾಗುವುದು.

ಈ) ಸರ್ವೆ ಕಾರ್ಯ ಕೈಗೊಳ್ಳಲು ನಗರ ಪಂಚಾಯಿತಿಯವರು ಹಣವನ್ನು 2.00 ಲಕ್ಷ ಸರ್ವೆ ಚಾರ್ಜ್‌ನ್ನು ತುಂಬಬೇಕಾಗುತ್ತದೆ. ಹಣ ಠೇವಣಿ ಮಾಡಿದ ಕೂಡಲೇ ಸರ್ವೇ ಕೆಲಸ ಮುಗಿಸಿ ಕಿಂಡಿ ಅಣೆಕಟ್ಟು ಸೇರಿಸಿ ಯೋಜನೆಯನ್ನು ತಯಾರಿಸಲಾಗುವುದು.